ಸಾಲದ ನಂಬ್ರ....................

# ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ನಂ. 5609

## ಉತ್ಪತ್ತಿ ಈಡಿನ ಮೇಲೆ ಅಪೇಕ್ಷಿಸುವ ಸಾಲದ ಅರ್ಜಿ

1. ಮೆಂಬರನ ನಂಬ್ರ ವ, ಹೆಸರು :
2. ಈಡು ಕೊಡುವ ಉತ್ಪತ್ತಿಯ ವಿವರ :
3. ಅಪೇಕ್ಷಿಸುವ ಮೊಬಲಗು ರೂ. :
4. ಸಾಲದ ಉದ್ದೇಶ :
5. ಸಾಲದ ವಾಯಿದೆ :
6. ಮ್ಹಾಲು ಇಡುವ ಸ್ಥಳ :
7. ಮೇಲೆ ವಿವರಿಸಿದ ಮ್ಹಾಲು ನನ್ನ ಸಂಪೂರ್ಣ ಹಕ್ಕಿನದ್ದಾಗಿರುವುದೆಂತ ನಾನು ಈ ಮೂಲಕ ದೃಢಪಡಿಸುತ್ತೇನೆ.

ಸ್ಥಳ ..............................

ತಾರೀಕು ..........................

ದಸ್ಕತು

---

# ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಿಗೆ

### (ಸಂಘದ ಸ್ವಾಧೀನ ಮ್ಹಾಲಿನ ಈಡಿನ ಮೇಲೆ ಬರಕೊಟ್ಟ ಕರಾರು ಪತ್ರ)

20............ನೇ ಇಸವಿ .................................. ತಾರೀಕು ತಿಂಗಳ ................................ರಲ್ಲಿ ............................................................................................ ಗ್ರಾಮದಲ್ಲಿರುವ ನಂಬ್ರ .......................ನೇ ಮೆಂಬರ ................................................................................................ನು ಬರಕೊಟ್ಟ ಕರಾರು.

1. ಸದರಿ ಸಹಕಾರ ಸಂಘದಿಂದ ರೂಪ್ಯಾ ..................................... (ಅಕ್ಷರದಲ್ಲಿ) ..................................... ................................ ಎಡ್ವಾನ್ಸ್ ಸಾಲವಾಗಿ ಬಂತು. ಈ ಸಾಲವನ್ನು ............................ ತಿಂಗಳಲ್ಲಿ ಅಂದರೆ ................ನೇ ಇಸವಿ .................. ತಾರೀಕು ....................ರ ಒಳಗೆ ಶೇಕಡಾ .................. ವ, ಭಾರತೀಯ ರಿಸರ್ವ್ ಬ್ಯಾಂಕ್‌ನವರು ಕಾಲ ಕಾಲಕ್ಕೆ ವಿಧಿಸುವ ಬಡ್ಡಿ ಸಮೇತ ಮರುಪಾವತಿ ಮಾಡಲಿಕ್ಕೆ ನಾನು ಬದ್ಧನಾಗಿರುತ್ತೇನೆ.
2. ಸದ್ರಿ ಸಾಲದ ಭದ್ರತೆಗಾಗಿ ಬೇರೆ ಜವಾಬುದಾರಿಗಳಿಂದ ವಿರಹಿತಪಟ್ಟ ನನ್ನ ಸ್ವಂತ ಹಕ್ಕಿನ ಬಾಬ್ತು ನಾನು ನಂಬ್ರ ................ನೇ ಯಾದಾಸ್ತಿನಲ್ಲಿ ಕಾಣಿಸಿದ ಮ್ಹಾಲುಗಳನ್ನು ನಾನು ಸಹಕಾರ ಸಂಘದವರಿಗೆ ಈಡು ಕೊಟ್ಟಿದ್ದೇನೆ. ಸದ್ರಿ ಈಡು ಕೊಟ್ಟ ಸರಕು ತಕ್ಕ ಭದ್ರತೆಯಿಂದ ಇರಿಸುವರೇ ಸಹಕಾರ ಸಂಘದವರು ಜವಾಬ್ದಾರಿ ವಹಿಸಿಕೊಂಡದ್ದರಿಂದ ಸದ್ರಿ ಸೊತ್ತನ್ನು ನಾನು ಸಹಕಾರ ಸಂಘದ ಕಟ್ಟಡದಲ್ಲಿ ಸಹಕಾರ ಸಂಘದವರ ವಶ ಕೊಟ್ಟಿರುತ್ತೇನೆ. ಸದ್ರಿ ಕಟ್ಟಡದಲ್ಲಿ ನನ್ನ ಸೊತ್ತನ್ನು ಇಟ್ಟು ಮಾರಾಟ ಮಾಡುವುದಕ್ಕಾಗಿ ಸಹಕಾರ ಸಂಘದ ಕ್ರಮದ ಮೇರೆಗೆ ಸಹಕಾರ ಸಂಘದವರು ನಿರ್ಣಯಿಸಬಹುದಾದ ಬಾಡಿಗೆ, ದಲಾಲಿ ಮತ್ತು ಇತರ ಖರ್ಚು ತೆರಲು ನಾನು ಬದ್ಧನಾಗಿರುತ್ತೇನೆ.

3. ಧಾರಣೆ ಕಡಿಮೆಯಾಗಿ ಅಥವಾ ಬೇರೆ ಯಾವ ಕಾರಣದಿಂದ ಸಹಕಾರ ಸಂಘಕ್ಕೆ ನಷ್ಟ ಸಂಭವಿಸುವ ಸಂದೇಹ ಉಂಟಾದಲ್ಲಿ ಸಹಕಾರ ಸಂಘದವರು ಹೆಚ್ಚಿನ ಜವಾಬ್ದಾರಿಯನ್ನು ಅಪೇಕ್ಷಿಸಿದಲ್ಲಿ ಸಹಕಾರ ಸಂಘದವರು ಹೇಳುವ ವಾಯಿದೆ ಒಳಗೆ ಅಂತಹ ಹೆಚ್ಚಿನ ಜವಾಬ್ದಾರಿಯನ್ನು ಕೊಡಲು ನಾನು ಬದ್ಧನಾಗಿರುತ್ತೇನೆ. ತಪ್ಪಿದಲ್ಲಿ ಪ್ರತ್ಯೇಕ ನೋಟೀಸು ಕೊಡದೇನೇ, ಈಡು ಇಟ್ಟ ಮ್ಹಾಲನ್ನು ವಿಕ್ರಯಿಸಿ ಹುಟ್ಟಿ ಬಂದ ಮೊಬಲಗನ್ನು ಮೇಲಿನ ಸಾಲದ ಲೆಕ್ಕಕ್ಕೆ ಜಮೆ ಬರೆದುಕೊಳ್ಳಲು ಸಹಕಾರ ಸಂಘಕ್ಕೆ ಅಧಿಕಾರವಿರುತ್ತದೆ. ಹಾಗೆ ಹುಟ್ಟಿಬಂದ ಐವೇಜಿನಿಂದ ಸಹಕಾರ ಸಂಘಕ್ಕೆ ಸಲ್ಲತಕ್ಕ ಹಣಗಳು ಭರ್ತಿಯಾಗದಿದ್ದರೆ ಹಾಗೆ ಬಾಕಿಯಾಗಿರುವ ಐವೇಜನ್ನು ಮುಂದಿನ ಬಡ್ಡಿ ಸಮೇತ ನಾನು ನನ್ನ ಸ್ಥಿರ ಸೊತ್ತುಗಳಿಂದಲೂ ದೇಹ ಜವಾಬ್ದಾರಿಯಿಂದಲೂ ತೆರುವರೆ ಬದ್ಧನಾಗಿರುತ್ತೇನೆ.

4. ವಾಯಿದೆಯ ಮುಂಚಿತವಾಗಿ ಯಾವಾಗಲಾದರೂ ಸಹಕಾರ ಸಂಘದಲ್ಲಿ ಈಡಿಟ್ಟ ಮ್ಹಾಲನ್ನು ಮಾರಾಟ ಮಾಡಿ ಸದರಿ ಸಾಲವನ್ನು ತೀರಿಸುವ ಸ್ವಾತಂತ್ರ್ಯವು ನನಗೆ ಇದೆ. ಇಂತಹ ಸಂದರ್ಭದಲ್ಲಿ ಸಹಕಾರ ಸಂಘದ ಕ್ರಮಗಳ ಮೇರೆಗೆ ಬಾಡಿಗೆ ಮತ್ತು ಇತರ ಹಾಸಲು ವ, ಖರ್ಚುಗಳನ್ನು ಸದರಿ ಸಾಲದ ಅಸಲು ಬಡ್ಡಿಯೊಂದಿಗೆ ಮುಂದಿನ ವ್ಯಾದೆ ಉಜ್ರು ಶಿವ್ಯಾ ಕೂಡಲೇ ತೆರಲು ಬದ್ಧನಾಗಿರುತ್ತೇನೆ.

5. ವ್ಯಾದೆಗೆ ತಪ್ಪಿ ಸಾಲದ ಲೆಕ್ಕವನ್ನು ಅಖ್ಯೆರಿ ಮಾಡದಿದ್ದಲ್ಲಿ ಅಂದಿನಿಂದ ಸದ್ರಿ ಸಾಲಕ್ಕೆ ಸಹಕಾರ ಸಂಘದ ನಿಬಂಧನೆಗಳ ಮೇರೆಗೆ ಶರ್ತ ಬಡ್ಡಿ ತೆರಲಿಕ್ಕೆ ಬದ್ಧನಾಗಿರುತ್ತೇನೆ. ನಾನು ಈಡಿಟ್ಟ ಮ್ಹಾಲನ್ನು ಸಹಕಾರ ಸಂಘದವರು ವಿಕ್ರಯಿಸಿದಲ್ಲಿ ಅದರಲ್ಲಿ ಹುಟ್ಟಿಬರುವ ಐವೇಜಿನಿಂದ ನನ್ನಿಂದ ಸಹಕಾರ ಸಂಘಕ್ಕೆ ಮೇಲೆ ಕಾಣಿಸಿದ ಅಸಲು, ಬಡ್ಡಿ, ದಲಾಲಿ ವ, ಇತರ ಖರ್ಚುಗಳನ್ನು ಸಹ ವಜಾ ಬರಕೊಂಡು ಮಿಕ್ಕ ಐವೇಜನ್ನು ಸಹಕಾರ ಸಂಘ ನನಗೆ ತೆರಬೇಕಾಗುವುದು. ಆದರೆ ಸರಕಿನ ವಿಕ್ರಯವು ಕಡಿಮೆಯಾದ ಸಂದರ್ಭದಲ್ಲಿ ಹಾಗೆ ಕಡಿಮೆ ಬಿದ್ದ ಮೊಬಲಗನ್ನು ನನ್ನ ದೇಹ ಮತ್ತು ಸ್ಥಿರಚರ ಸೊತ್ತುಗಳಿಂದ ತೆರಲಿಕ್ಕೆ ನಾನು ಜವಾಬ್ದಾರಿಯಾಗಿರುತ್ತೇನೆ.

6. ಸಹಕಾರ ಸಂಘಕ್ಕೆ ಈಡು ಇಟ್ಟ ಮ್ಹಾಲು ಕಸರಾಗಿದ್ದರೆ ಅಂತಹ ಸ್ವಾಭಾವಿಕವಾಗಿ ಮ್ಹಾಲಿನಲ್ಲಿ ಬರುವ ತೇಮಾನಿಗೆ ನಾನು ಜವಾಬ್ದಾರನಲ್ಲದೆ ಸಹಕಾರ ಸಂಘ ಜವಾಬ್ದಾರಿಯಲ್ಲ.

7. ಈಡಿಟ್ಟ ಮ್ಹಾಲುಗಳ ವಿವರಗಳು ಮೇಲೆ ಕಾಣಿಸಿದ ಯಾದಾಸ್ತಿನಲ್ಲಿ ಇರುವುದೇ ಆಗಿರುತ್ತದೆ.

8. ಸದ್ರಿ ಮ್ಹಾಲು ವಿಕ್ರಿತ ಮಾಡುವುದಾಗಿರುವುದರಿಂದ ಹಾಗೆ ವಿಕ್ರಿತ ಮಾಡುವಲ್ಲಿ ಈ ಸಹಕಾರ ಸಂಘದ ಮೂಲಕವೇ ವಿಕ್ರಿತ ಮಾಡುವರೇ ನಾನು ಬದ್ಧನು / ಸದ್ರಿ ಮ್ಹಾಲು ನನ್ನ ಸ್ವಂತ ಉಪಯೋಗದ ಬಗ್ಗೆ ಅವಶ್ಯವಿರುವುದರಿಂದ ಈ ಸಾಲ ಪರಿಹರಿಸಿ ನಾನು ವಾಪಾಸು ಬಿಡಿಸಿಕೊಳ್ಳುವರೆ ಒಪ್ಪಿಕೊಂಡು ಬರಕೊಟ್ಟ ಕರಾರು.

9. ಸಹಕಾರ ಸಂಘದ ಉಪನಿಬಂಧನೆಗಳನ್ನು ಹಾಗೂ ಜ್ಯಾರಿಯಲ್ಲಿರುವ ಉಪಕ್ರಮಗಳನ್ನು ಕೂಡಾ ಅನುಸರಿಸಲಿಕ್ಕೆ ನಾನು ಪೂರ್ಣ ಬದ್ಧನಾಗಿರುತ್ತೇನೆ.

10. ಈ ಕರಾರಿನ ಪ್ರತಿಫಲ ಐವೇಜು ರೂಪ್ಯಾ ........................... (ಅಕ್ಷರದಲ್ಲಿ) ............................................
ನನಗೆ
...................................ತ್ತು ................................................ ಕೊಟ್ಟಂತೆ ಪರಿಪೂರ್ಣವಾಗಿ ಬಂತು.

ಕರಾರು ಕೊಟ್ಟವರ ಸಹಿ ................................

ಈ ಬಗ್ಗೆ ಸಾಕ್ಷಿ :

Attested and signed before me.

*Chief Executive Officer*